# ಕಸ್ತೂರ್‌ಬಾ v/s ಗಾಂಧಿ



## ಹೊಸ ಧಾರಾವಾಹಿ

ಗಾಂಧಿ ಈ ದೇಶದ ಅಂತಃಸತ್ವ. ಈ ಅಂತಃಸತ್ವದ ಜೀವಶಕ್ತಿ ಕಸ್ತೂರ್ ಬಾ. ಮೋಹನದಾಸನೆಂಬ ವ್ಯಕ್ತಿ ಮಹಾತ್ಮನಾಗಿ ರೂಪುಗೊಂಡ ಪವಾಡದಲ್ಲಿ ಕಸ್ತೂರ್ ಪಾತ್ರ ಮಹತ್ವದ್ದು. ಗಾಂಧಿಯ ಜೀವನದಲ್ಲಿ ಅವರದು ಸಹಧರ್ಮಿಣಿ ಪಾತ್ರವಷ್ಟೇ ಆಗಿರಲಿಲ್ಲ; ಅಂತರಂಗದ ವಿಮರ್ಶಕಿಯೂ ಆಗುವ ಮೂಲಕ ಗಾಂಧೀಜಿಯ ವ್ಯಕ್ತಿತ್ವ ಪುಟಗೊಳ್ಳಲು ಕಾರಣರಾದರು. ಭಾರತದ ಮಾತೃ ಪರಂಪರೆಯ ಬಹುದೊಡ್ಡ ರೂಪಕವಾದ ಕಸ್ತೂರ್ ಬಾ ಜೀವನದ ಕಥೆಯನ್ನು ಹೇಳುತ್ತಲೇ, ಗಾಂಧಿಯನ್ನೂ ಕಾಣಿಸುವ ವಿಶಿಷ್ಟ ಕಾದಂಬರಿ

**ಬರಗೂರು ರಾಮಚಂದ್ರಪ್ಪ**

ಅವರ 'ಕಸ್ತೂರ್‌ಬಾ V/s ಗಾಂಧಿ'.

ಮಹಾತ್ಮನ 150ನೇ ಜನ್ಮದಿನಾಚರಣೆ ಸಂದರ್ಭಕ್ಕೆ ಕನ್ನಡ ಸಂವೇದನೆಯ ಸೃಜನಶೀಲ ಸ್ಪಂದನ 'ಕಸ್ತೂರ್‌ಬಾ V/s ಗಾಂಧಿ'. ಮುಂದಿನ ಸಂಚಿಕೆಯಿಂದ, ಮಹಾತ್ಮನ ರೂಪಿಸಿದ ಮಡದಿಯ ಕಥೆ ಧಾರಾವಾಹಿ ರೂಪದಲ್ಲಿ.



## ನಕ್ಕುಬಿಡಿ

ಮಗ: ಅಪ್ಪಾ ಪ್ರಾಮಾಣಿಕತೆ ಎಂದರೇನು?

ರಾಜಕಾರಣಿ: ಅಂದರೆ ನೀನು ಮಾತು ಕೊಟ್ಟರೆ ಅದನ್ನು ಚಾಚೂ ತಪ್ಪದೆ ಪಾಲಿಸಬೇಕು.

ಮಗ: ಹಾಗಾದರೆ ವಿವೇಚನೆ ಅಂದರೆ?

ರಾಜಕಾರಣಿ: ಮಾತು ಕೊಡದೇ ಇರುವುದು

***

ಗುರುಗಳು: ಗುಂಡ, ಒಂದು ಕಂಬಳಿ ಹೆಣೆಯಬೇಕಾದರೆ ಎಷ್ಟು ಕುರಿಗಳು ಬೇಕು?

ಗುಂಡ: ಸಾರ್, ಅದು ಕುರಿಗಳ ಕೈಯಲ್ಲಿ ಸಾಧ್ಯವಿಲ್ಲ. ಮನುಷ್ಯರೇ ಹೆಣೆಯಬೇಕು.

***

ಒಂದು ಸಮಾಧಿಯ ಮೇಲೆ ಹೀಗೆ ಬರೆಯಲಾಗಿತ್ತು: 'ಇಲ್ಲಿ ಒಬ್ಬ ಪ್ರಾಮಾಣಿಕ ವ್ಯಕ್ತಿ ಮತ್ತು ಒಬ್ಬ ರಾಜಕಾರಣಿ ಮಲಗಿದ್ದಾರೆ'.

ಅದನ್ನು ನೋಡಿದ ಗುಂಡ ಹೇಳಿದ: ಅಯ್ಯೋ ಇದೇನು ನಾಚಿಕೆಗೇಡಿನ ವಿಷಯ! ಒಂದೇ ಸಮಾಧಿಯಲ್ಲಿ ಇಬ್ಬರು ಮಲಗುವುದೆಂದರೇನು?

***

ಗುಂಡ: ರೀ ವಕೀಲರೆ, ಈಗ ನಾನೊಂದು ವಿಲ್ ಬರೆಸಬೇಕು. ನಾನು ಸತ್ತ ನಂತರ ಮೆರವಣಿಗೆ ಮಾಡುವಾಗ ಪ್ರಸಿದ್ಧ ಸಂಗೀತಗಾರರಿಂದ ಶೋಕಗೀತೆ ಹಾಡಿಸುವ ಏರ್ಪಾಡು ಮಾಡಬೇಕು.

ವಕೀಲ: ಆಯಿತು ಸಾರ್! ಅಂದಹಾಗೆ ಅಂದು ನೀವು ಯಾವ ಗೀತೆಯನ್ನು ಕೇಳಲು ಬಯಸುತ್ತೀರಿ?

***

ಟೀಚರ್: ಏನೋ ಗುಂಡ, ಹೋಂ ವರ್ಕ್ ಯಾಕೆ ಮಾಡಿಲ್ಲ?

ಗುಂಡ: ಸಾರ್ ಪೆನ್ನಲ್ಲಿ ಬರೀಬೇಕೋ ಅಥವ ಪೆನ್ಸಿಲ್‌ನಲ್ಲಿ ಬರೀಬೇಕೋ ಗೊತ್ತಾಗಲಿಲ್ಲ.

ಟೀಚರ್: ಕೈಲಿ ಬರೀಬೇಕು ತಿಳೀತಾ?

ಗುಂಡ: ನನ್ನ ಹೆಂಡತಿ ರಾತ್ರಿ ಎರಡು ಗಂಟೆಯಾದರೂ ನಿದ್ದೆ ಮಾಡದೆ ಬಾಗಿಲಲ್ಲೇ ನಿಂತು ಕಾಯ್ತಾ ಇರ್ತಾಳೆ.

ಗೆಳೆಯ: ಯಾಕೆ ಆಕೆಗೆ ನಿದ್ದೆ ಬರೋದಿಲ್ಲವೇ?

ಗುಂಡ: ಅದು ಹಾಗಲ್ಲ. ನಾನು ಕ್ಲಬ್ಬಿನಿಂದ ಬರೋವರೆವಿಗೂ ಅವಳು ಬಾಗಿಲಲ್ಲೇ ಕಾಯ್ತಾ ಇರ್ತಾಳೆ.

***

ಹೆಂಡತಿ: ರೀ ನನ್ನನ್ನು ಕಂಡರೆ ನಿಮಗೆ ಅದೆಷ್ಟು ಪ್ರೀತಿ. ನಾನು ಮುದುಕಿ ಆದಮೇಲೂ ನನ್ನನ್ನು ಹೀಗೇ ಪ್ರೀತಿಸುತ್ತೀರಾ?

ಗುಂಡ: ಅಯ್ಯೋ, ಈಗ ಹತ್ತು ವರ್ಷದಿಂದ ನಾನು ಅದನ್ನೇ ತಾನೇ ಮಾಡ್ತಾ ಇರೋದು.

***

ಒಂದು ಅಪರಾಧದ ಮೇಲೆ ಇಬ್ಬರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ಆಗಿರುತ್ತದೆ. ಅವರಲ್ಲಿ ಒಬ್ಬ ಕವಿಯಾಗಿರುತ್ತಾನೆ.

ಜೈಲರ್: ನಾಳೆ ನಿಮ್ಮಿಬ್ಬರನ್ನು ಗಲ್ಲಿಗೇರಿಸಲಾಗುತ್ತದೆ. ನಿಮ್ಮ ಕೊನೆಯ ಆಸೆ ಏನು ಹೇಳಿ, ಈಡೇರಿಸಲಾಗುತ್ತದೆ.

ಕವಿ: ಸಾರ್ ನಾನು ಕವಿ. ಕವನಗಳನ್ನು ರಚಿಸಿರುವೆ. ಅವುಗಳನ್ನು ಓದದ ಮೇಲೆ ನನ್ನನ್ನು ಗಲ್ಲಿಗೇರಿಸಿ.

ಇನ್ನೊಬ್ಬ: ಸಾರ್ ಅವನು ಕವನಗಳನ್ನು ಓದುವುದಕ್ಕಿಂತ ಮೊದಲೇ ನನ್ನನ್ನು ಗಲ್ಲಿಗೇರಿಸಿ.

***

ಗೆಳೆಯ: ಏನೋ ಗುಂಡ, ಕಸ ಗುಡಿಸೋದು, ಪಾತ್ರೆ ತೊಳೆಯೋದು, ಬಟ್ಟೆ ಒಗೆಯೋದು ಎಲ್ಲಾ ನೀನೇ ಮಾಡ್ತಾ ಇದೀಯಾ?

ಗುಂಡ: ಹೌದಯ್ಯ! ಗೃಹ ಉದ್ಯೋಗಕ್ಕೆ ಒತ್ತು ನೀಡಬೇಕು ಅಂತ ಪ್ರಧಾನಮಂತ್ರಿ ಹೇಳಿದ್ದಾರಲ್ಲ.

(ಸಂಗ್ರಹ) ಎ ಂ.ಕೆ. ಮಂಜುನಾಥ್


